# 17

# ಶಿಷ್ಯತ್ವದ ಕರೆ

## ಲೂಕ 5:1-11, ಒಂದು ನಿಕಟ ನೋಟ

ಯೇಸುವಿನ ಹಿಂಬಾಲಕರಿಗೆ ಬೈಬಲ್‌ನಲ್ಲಿ ಸಾಮಾನ್ಯವಾಗಿ ಬಳಕೆಯಾದ ಒಂದು ಪದ "ಶಿಷ್ಯರು" ಎಂಬುದು ಆಗಿದೆ (ಮತ್ತಾಯ 5:1; 8:21, 23; 9:19; ಲೂಕ 6:1, 2, 7; 9:1). "ಶಿಷ್ಯರು" ಎಂಬ ಪದವು ಗ್ರೀಕ್ ಪದದ "ಕಲಿಯುವವ"[1] ಎಂಬ ಪದದ ಭಾಷಾಂತರಾಗಿದೆ. ಸಂಪೂರ್ಣಾರ್ಥದಲ್ಲಿ ಶಿಷ್ಯನು ಗುರುವನ್ನು ಹಿಂಬಾಲಿಸುವವನೂ (ಮತ್ತಾಯ 16:24), ತನ್ನ ಗುರುವು (ಮತ್ತಾಯ 11:29), ನಿರ್ದೇಶಿಸಿದ್ದನ್ನು ಅನುಸರಿಸುವವನೂ (ಯೋಹಾನ 8:31) ಆಗಿರುತ್ತಾನೆ. ಒಂದು ನಿಕಟವಾದ ಗುರು/ಶಿಷ್ಯರ ಸಂಬಂಧವು ಅಸ್ತಿತ್ವದಲ್ಲಿರಿಸುವುದಾಗಿದೆ. ಒಬ್ಬ ನಿಜ ಶಿಷ್ಯನು ತನ್ನ ಗುರುವಿನ ಹಾಗೆ ಆಗುತ್ತಾನೆ (ಮತ್ತಾಯ 10:25).

ಈ ಬೋಧನೆಯು "ಶಿಷ್ಯತ್ವದ ಕರೆ" ಎಂಬುದರ ಮೇಲೆ ಇದ್ದು, ನಮ್ಮ ವೇದ ಭಾಗವು ಲೂಕ 5:1-11ರಲ್ಲಿರುವುದಾಗಿದೆ.[2] ಯೇಸು ಪೇತ್ರನನ್ನೂ ಮತ್ತು ಆತನ ಸ್ನೇಹಿತರನ್ನೂ ಕರೆಯುವಾಗಿನ ಸಂದರ್ಭವನ್ನು ಇದು ಹೇಳುವುದಾಗಿದೆ. ನಮ್ಮ ಅಧ್ಯಯನದ ಆರಂಭದಲ್ಲಿ ಶಿಷ್ಯತ್ವ ಕೆಲ ಅವಶ್ಯಕತೆಗಳನ್ನು ಹುಡುಕುವಾ.

### ಕೆಲವನ್ನಾದರೂ ಕಲಿಯಬೇಕು (ವಚನಗಳು 1-3)

ನೀನು ಒಂದು ವೇಳೆ ಯೇಸುವಿನ ಶಿಷ್ಯನಾಗಿದ್ದಾದರೆ ನೀನು ಕೆಲವನ್ನಾದರೂ ಕಲಿಯಲೇ ಬೇಕು. ಕರ್ತನಿಂದ ನಿರ್ದೇಶಿಸಲ್ಪಡುವುದಕ್ಕೆ ನೀನು ಒಪ್ಪಿಕೊಳ್ಳಲೇಬೇಕು. ಎಲ್ಲವನ್ನೂ ತಿಳಿದಿದ್ದೇವೆಂಬ ಭಾವನೆಯುಳ್ಳವರು "ನನಗೆ ಯಾರೋಬ್ಬರೂ ಏನನ್ನೂ ಕಲಿಸಲಾರರು" ಎಂದು ಹೇಳುತ್ತಾರೆ. ನೀವು ಕೇಳುವುದಕ್ಕೆ ಮತ್ತು ಕಲಿಯುವುದಕ್ಕೆ ಸಿದ್ಧರಾಗುವ ತನಕ, ನೀವು ಕ್ರಿಸ್ತ ಶಿಷ್ಯರಾಗಿರಲಾರಿರಿ. ಇದರ ಮಹತ್ವವೇ ನಮ್ಮ ವೇದಭಾಗದಲ್ಲಿ ಇದೆ.

ಗೆನೆಜರೇತಿನ ದಂಡೆಯ[3] ಯೇಸುವಿನ ಬೋಧನೆಯೊಂದಿಗೆ ನಮ್ಮ ಕಥೆಯು ಪ್ರಾರಂಭವಾಗುತ್ತದೆ. ಹತ್ತಿರದಲ್ಲಿಯೇ ಪೇತ್ರನು ತನ್ನ ದೋಣಿಯೆಡೆ ಇದ್ದುಕೊಂಡು ತನ್ನ ಬಲೆಗಳನ್ನು ತೊಳೆಯುತ್ತಿದ್ದನು. ಆತನು ಮತ್ತು ಆತನ ಪಾಲುದಾರರು ರಾತ್ರಿಯೆಲ್ಲಾ ಬಲೆಯನ್ನು ಹಾಕಿದ್ದಾರೆ, ಆದರೆ ಹುಣ್ಣಾದ ಸ್ನಾಯುಗಳು ಮತ್ತು ಕೊಳೆಯಾದ ಬಲೆಗಳನ್ನು ಅವರು ಹೊಂದಿದ್ದಕ್ಕೆ ಅದು ಸಾಕ್ಷಿ ಎಂದು ಅವರಿಗೆ ತೋರಿತು. ನಾನು ಪೇತ್ರನನ್ನು ನೋಡ ಬಲ್ಲೆ, ಯೇಸುವಿನ ಮಾತುಗಳನ್ನು ಕೇಳುತ್ತಾ ಆತನ ಬೆರಳುಗಳು ಮಡಿಕೆಯಾದ ಬಲೆಯನ್ನು ಕುಶಲತೆಯಿಂದ ತೆಗೆಯುತ್ತಾ ಮತ್ತು ಗಂಟಾಗಿದ್ದ ಬಲೆಯ ಚೌಕಿನಲ್ಲಿ ಅಂಟಿದ್ದ ಕೊಳೆ ಯನ್ನು ಬಿಡಿಸುತ್ತಾ ಒಂದೆಡೆ ತಲೆಯನ್ನಲ್ಲಾಡಿಸುತ್ತಾ ಇದ್ದಾನೆ. ಇದು ಯೇಸುವಿನೊಡನೆ ಆ ಬೆಸ್ತನದು ಮೊದಲು ಸಂದರ್ಶನವೇನಲ್ಲ. ಆತನು ಯುದಾಯದಲ್ಲಿ ಯೇಸುವಿನೊಡನೆ ಪ್ರಯಾಣಮಾಡಿದ್ದಾನೆ. ಗಲಿಲಾಯ ಪ್ರಾಂತದಿಂದ ಮರಳಿದ ನಂತರ, ಆತನು ತನ್ನ ಸ್ವಂತ ಉದ್ಯೋಗಕ್ಕೆ ಮರಳಿದ್ದನು.

ಯೇಸು ಬೋಧಿಸುತ್ತಿದ್ದ ಹಾಗೆಯೇ ಜನಜಂಗುಳಿಯು ಬೆಳೆಯಲು ಆರಂಭಿಸಿತು. ಕೌತುಕಮಯಿಗಳಾದ ಕೇಳುಗರು ಕ್ರಿಸ್ತನ ಹತ್ತಿರ ಹತ್ತಿರ ಗುಂಪಾಗಿ ಬಂದು ಆತನನ್ನು ನೂಕುತ್ತಾ ಇರಲು ನೀರು ಆತನ ಮೆಟ್ಟನ್ನು ಸೋಕತೊಡಗಿತು. ಆತನು ಪೇತ್ರನು ದೋಣಿಯ ಕಡೆಗೆ ನಡೆದ, ಅದರೊಳಗಡೆಗೆ ಹೋದನು ಮತ್ತು ಅಲ್ಲಿದ್ದ ಬೆಸ್ತರಿಗೆ ದೋಣಿಯನ್ನು

ಕೆರೆಯೊಳಕ್ಕೆ ನೂಕಲು ಹೇಳಿದನು. ಅಲ್ಲಿ ಆತನು ತನ್ನ ಪೀಠವನ್ನು ಕಮಾನಿನಂತೆ ಮಾಡಿ, ತನ್ನ ಉಪದೇಶವನ್ನು ಮುಂದುವರೆಸಿದನು.

ಪೇತ್ರನ, ಮಧ್ಯದಲ್ಲಿ ಸಿದ್ಧನಾದ ರೀತಿಯಲ್ಲಿ ಕುಳಿತಿರುವ ಹಾಗೆಯೇ ಇದ್ದ ಎಂದು ನೀನು ಯೋಚಿಸುತ್ತಿದ್ದಿಯೋ? ಆತನು ಯಾವುದನ್ನು ಕೇಳುತ್ತಾ ಇದ್ದನು? ನಮ್ಮ ವೇದ ಭಾಗವು ಹೇಳುವಂತೆ ಯೇಸು, "ದೇವರ ವಾಕ್ಯವನ್ನು ಬೋಧಿಸುತ್ತಿದ್ದನು ಎಂದನು" (ವಚನ 1). ನೀನು ದೇವ ವಾಕ್ಯದ ವಿದ್ಯಾರ್ಥಿಯಾಗಿರದ ಹೊರತು ನೀನು ಕರ್ತನ ಶಿಷ್ಯನಾಗಿರಲಾರಿ. "... ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ *ಕಲಿತುಕೊಳ್ಳಿರಿ*; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು" (ಮತ್ತಾಯ 11:29; ಒತ್ತಿ ಹೇಳಿದ್ದು)!

## ನೀನು ಕೆಲವನ್ನಾದರೂ ಅರಿತುಕೊಳ್ಳಬೇಕು (ವಚನಗಳು 3-8)

ಕೊನೆಗೂ ಯೇಸು ತನ್ನ ಬೋಧನೆಯನ್ನು ಮುಗಿಸಿದನು. ಆತನು ಆ ಜನಸಮೂಹವನ್ನು ಕಳಿಸಿದನು ಆದರೆ ಪೇತ್ರನನ್ನಲ್ಲ. ಪೇತ್ರನಲ್ಲಿ ಬಲು ಶಕ್ತತೆಯು ಇತ್ತು, ಆದರೆ ಕಲಿಯುವದೂ ಬಹಳ ಇತ್ತು. ಇದು ಆತನ ಇನ್ನೊಂದು ಪಾಠಕ್ಕೆ ಇರುವ ಸಮಯವು ಆಗಿತ್ತು. ಯೇಸು ಎಂದಿಗೂ ಅನಿರೀಕ್ಷಿತವಾಗಿರುವ ಶಾಸ್ತ್ರ ಸಮ್ಮತವಿಲ್ಲದಂತ ಬೋಧಕನಾಗಿರಲಿಲ್ಲ. ಸಿಮೋನನಿಗೆ, "ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನು ಭೇಟಿಗಾಗಿ ನಿಮ್ಮ ಬಲೆಗಳನ್ನು ಹಾಕಿರಿ" ಎಂದು ಆಜ್ಞಾಪಿಸಿದನು (ವಚನ 4).

ಪ್ರತಿಯೊಬ್ಬ ಒಳ್ಳೆಯ ಬೆಸ್ತರೂ ಗಲಿಲಾಯ ಸಮುದ್ರದ ಬಗೆಗೆ ತಿಳಿದ ಹಾಗೆ ಸಿಮೋನನು ಕೂಡಾ ತಿಳಿದಿದ್ದನು. ಮೀನು ಊಟಕ್ಕೆ ಬರುವ ಸಮ ರಾತ್ರಿ ಸಮಯವಾಗಿತ್ತು ಹೊರತು ಹಗಲು ಹೊತ್ತು ಅಲ್ಲ ಆದ್ದರಿಂದ ಮೀನುಗಾರಿಕೆಗೆ ಯೋಗ್ಯ ಸಮಯ ರಾತ್ರಿಯೇ ಆಗಿತ್ತು. ಮೀನು ಹಿಡಿಯು ಸ್ಥಳ ಆಳವಿಲ್ಲದ ನೀರಿನ ಸ್ಥಳವೇ ಆಗಿತ್ತು ಹೊರತು ಆಳವಾದ ನೀರಿರುವ ಸ್ಥಳವಲ್ಲ. ಆ ಸಮಯದಲ್ಲಿ ಮೀನುಗಳು ಸಿಕ್ಕದ್ದಾದರೆ ಆತನ ಪ್ರಯತ್ನವು ಉಪಯೋಗಕ್ಕೆ ಬರುತ್ತಿತ್ತು, ಆದರೆ ಹತ್ತು ಅಥವಾ ಅದಕ್ಕಿಂತ ಹೆಚ್ಚು ತಾಸುಗಳವರೆಗೆ ಪ್ರಯತ್ನಿಸಿದ ಯಾವುದೇ ಯಶಸ್ಸಿಲ್ಲದೇ ಹೋದ ಸಮಯದಲ್ಲಿ ತಿರುಗಿ ಮೀನನ್ನು ಹಿಡಿಯಲು ಹೋಗಬಾರದು. ಹಾಗೆ ಮಾಡಿದ್ದಾದರೆ ಅದು ವ್ಯರ್ಥವಾಗುತ್ತದೆ.

ಒಬ್ಬ ಅನುಭವಿಯಾದ,ಶ್ರಮದಾಯಿಯಾದ, ಯಶಸ್ವಿಯಾದ ಮೀನುಗಾರನಿಗೆ, ಮೀನನ್ನು ಹೇಗೆ ಹಿಡಿಯಬೇಕೆಂದು ಒಬ್ಬ ಬಡಗಿಯು ಹೇಳುವದು (ಮಾರ್ಕ 6:3) ಸಿಮೋನನಿಗೆ ಅಸಂತುಷ್ಟಿಯ ಅನುಭವವೂ ಆದದ್ದು ಸ್ವಾಭಾವಿಕವಾದದ್ದು ಆಗಿತ್ತು (ಎಂದು ಬೋಧನೆಯನ್ನು ಮಾಡದವರು ಬೋಧನೆಯನ್ನು ಹೇಗೆ ಮಾಡಬೇಕೆಂದು ನನಗೆ ಹೇಳಬರುವ ಜನರ ಮೇಲೆ ನನಗೆ ಅಸಂತುಷ್ಟಿಯು ಆಗುತ್ತದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ). "ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನೂ ಸಿಕ್ಕಲಿಲ್ಲ ..." (ವಚನ 5) ಎಂಬ ಪೇತ್ರನ ಪ್ರತಿಕ್ರಿಯೆಯು ಇದನ್ನೇ ಸೂಚಿಸುತ್ತದೆ.

ಮುಂಬರುವ "ಆದರೆ" ಎಂಬ ವಾಕ್ಯವನ್ನು ಗಮನಿಸಿರಿ. "ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ" (ವಚನ 5) KJVಯಲ್ಲಿ ಬಳಕೆಯಾದ: "ಹಾಗಿದ್ದಾಗ್ಯೂ" ಎಂಬ ಪದವು ನನಗೆ ಬಲುಮೆಚ್ಚಿಕೆಯಾದುದ್ದಾಗಿದೆ. ಇನ್ನೊಂದು ಮಾತಿನಲ್ಲಿ "ನಾವು ರಾತ್ರಿಯೆಲ್ಲಾ ಬಲೆಹಾಕಿದೆವು ಯಾವ ಪ್ರಯೋಜನವೂ ಆಗಲಿಲ್ಲ ... ಹಾಗಿದ್ದಾಗ್ಯೂ ... ನೀನು ತಿರುಗಿ ಪ್ರಯತ್ನಿಸಲು ನನಗೆ ಹೇಳಿದ್ದಾದರೆ, ನಾನು ಮಾಡುತ್ತೇನೆ. ಮೀನುಗಾರಿಕೆ ಈ ದೇಶಕ್ಕಿಂತ ಹೆಚ್ಚಿನ ಸಮಯದಲ್ಲಿ ನಾನು ಕಲಿತ ಎಲ್ಲದಕ್ಕೂ ವಿರುದ್ಧವಾಗಿ ಹೋದರೂ ಸರಿ, ನೀನು ಏನು ಮಾಡಲು ಹೇಳುತ್ತೀಯೋ ಅದನ್ನೇ ನಾನು ಮಾಡುತ್ತೇನೆ."

ಪೇತ್ರನು ಅಂಥ ಮನೋವೃತ್ತಿಯನ್ನು ಹೇಗೆ ಹೊಂದಿರಬಹುದು? ಅದಕ್ಕೆ ಉತ್ತರವು ಆತನು ಯೇಸುವನ್ನು "ಗುರುವೇ" ಎಂದು ಸಂಬೋಧಿಸಿದ ಶೀರ್ಷಿಕೆಯಲ್ಲಿಯೇ ಸಿಕ್ಕುತ್ತದೆ.

ಮೂಲ ವೇದಭಾಗದಲ್ಲಿ "ಗುರು" ಅಥವಾ "ಕರ್ತ"[4] ಎಂಬ ಪದಗಳಿಗೆ ಸಾಮಾನ್ಯವಾದುದ್ದು ಆಗಿರಲಿಲ್ಲ. ಲೂಕನಿಂದ ವಿಶೇಷವಾಗಿ ಬಳಸಲ್ಪಟ್ಟ ವಿಶೇಷವಾದ ಪದವಾಗಿದ್ದು, ಈ ಪದವಿಯು ಕೇವಲ ಯೇಸುವಿಗೆ ಮಾತ್ರ ಅನ್ವಯಿಸುವುದಾಗಿದೆ (ಲೂಕ 8:24, 45; 9:33, 49; 17:13). ಇದೊಂದು ಗ್ರೀಕ್ ಪದದ ಸಂಯುಕ್ತ ಪದವಾಗಿದ್ದು ವಾಕ್ಯಕ್ಕೋಸ್ಕರ ಆಗಿರುವುದಕ್ಕಾಗಿ ಅದರ ಜೊತೆ "ನಿಂತುಕೊಳ್ಳು" ವಾಕ್ಯವನ್ನು ಸೇರಿಸುವುದಾಗಿದೆ. ಇದು ಇನ್ನೊಂದರ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿರುವನನ್ನು ಅಂದರೆ (ಬಲವಾಗಿ) "ನಿಂತುಕೊಳ್ಳುವುದಕ್ಕಾಗಿ" ಇರುವವನನ್ನು ಸೂಚಿಸುವುದಾಗಿದೆ. ಯೇಸುವಿನ ಆಜ್ಞೆಯು ಮಹತ್ವವಿರಲಿ ಬಿಡಲಿ ಪೇತ್ರನು ಅದನ್ನು ಒಪ್ಪಿಕೊಂಡನು. ಯೇಸು ಗುರುವಾಗಿದ್ದನು; ಆತನು ದಾಸನಾಗಿದ್ದ, ಆತನ ವಿಧೇಯನಾಗಲು ಸಿದ್ಧನಾದನು.

ನಾವು ಒಂದು ವೇಳೆ ಯೇಸುವಿನ ಶಿಷ್ಯರಾಗಿದ್ದಾದರೆ, ಇದರಲ್ಲಿನ ಕೆಲವನ್ನು ನಾವು ಅರ್ಥೈಸಿಕೊಳ್ಳಬಲ್ಲೆವು; ಆತನು ಗುರುವಾಗಿದ್ದಾನೆ ಎಂದು ನಾವು ಅರ್ಥೈಸಿಕೊಳ್ಳಲೇಬೇಕು. ನಾವು ಗುರುವಿಗೆ ಆದೇಶವನ್ನು ಕೊಡಲಾರೆವು; ಬದಲಾಗಿ ಆತನು ನಮಗೆ ಆದೇಶಿಸುವವನಾಗಿರುತ್ತಾನೆ. ನಾವೇನಾಗಿದ್ದೇವೆಂದು ನಾವು ಆತನಿಗೆ ಹೇಳಲಾರೆವು ಮತ್ತು ಹಾಗೆ ಕೂಡಾ ಮಾಡಲಾರೆವು; ನಾವು ಅದನ್ನು ಮಾಡಲೇಬೇಕು ಎಂದು ಆತನು ನಮಗೆ ಹೇಳುವವನಾಗಿರುತ್ತಾನೆ. "ಗುರುವೇ" ಇದೊಂದು ಬಲವಾದ ಪದವಾಗಿದ್ದು, ಗುರುವು ಎಂದಿಗೂ ಸೂಚನೆಗಳನ್ನು ಕಡುವುದಿಲ್ಲ, ಗುರುಗಳು ಸಲಹೆಗಳನ್ನು ಕೊಡುವುದಿಲ್ಲ; ಗುರುವು ಆಜ್ಞೆಗಳನ್ನು ಅಂದರೆ ಯಾವುದೇ ಪ್ರಶ್ನೆಗಳಿಲ್ಲದೇ ಪಾಲಿಸುವ ಆಜ್ಞೆಗಳನ್ನು ಕೊಡುವವನಾಗಿರುತ್ತಾನೆ.

ಆಳವಾದ ನೀರಿನೆಡೆಗೆ ದೋಣಿಯನ್ನು ತೆಗೆದುಕೊಂಡು ಹೋಗುವಾಗ ಪೇತ್ರನಿಗೆ ಅದು ಹುಚ್ಚತನ ಅನ್ನಿಸಿರಬಹುದು. ತನ್ನ ಬಲೆಗಳನ್ನು ನೀರಿನಲ್ಲಿ ಎಸೆಯುವಾಗ ಆತನಿಗೆ ತುಸು ಮುಜುಗರವೂ ಆಗಿರಬಹುದು. ದಂಡೆಯಲ್ಲಿನ ಇತರ ಬೆಸ್ತರ ನಗುವನ್ನು ಆತನು ಕೇಳಿರಬಹುದು.[5] ಹಾಗಿದ್ದಾಗ್ಯೂ ಆತನು ಗುರುವು ಹೇಳಿದಂತೆಯೇ ಮಾಡಿದನು.

ಕರ್ತನು ಈ ವಿಧೇಯತೆಯನ್ನು ಹೇಗೆ ಬಹುಮಾನಿಸಿದನು? ಪೇತ್ರನು ಹಗ್ಗವನ್ನು ಎಳೆಯುವಲ್ಲಿ ಆಗುವ ಅನುಭವದ ತನಕದಷ್ಟು ಉದ್ದವಾಗಿರಲಿಲ್ಲ. ಆತನು ಮತ್ತು ಆತನ ಸಹಾಯಕರು ಮೀನುಗಳಿಂದ ತುಂಬಿದ ಬಲೆಯನ್ನು ಎಳೆಯಲು ಆರಂಭಿಸಿದರು. ಮೀನುಗಳು ಬಲೆಯ ಒಳಗಡೆ ಗಿಜುಗುಡುತ್ತಿದ್ದವು. ಅವುಗಳ ಬಾಲಗಳು ನೀರಿನಲ್ಲಿ ಅಪ್ಪಳಿಸುತ್ತಿದ್ದವು. ಆ ಜನರು ಬಲೆಯನ್ನು ದೋಣಿಗೆ ತುಂಬಲು ಪ್ರಯತ್ನಿಸುತ್ತಿದ್ದಂತೆ ಸುತ್ತಿಕೊಂಡಂತಿದ್ದ ಚೌಕಗಳು ಮುರಿಯತೊಡಗಿದವು. ಭ್ರಾಂತರಾದವರಂತೆ ಅವರು ದಡದಲ್ಲಿದ್ದ ತಮ್ಮ ಪಾಲುದಾರರಿಗೆ ಬಂದು ಸಹಾಯ ಮಾಡಲು ಸನ್ನೆಯನ್ನು ಮಾಡಿದರು.

ಯೋಹಾನ ಮತ್ತು ಯಾಕೋಬರು ತಮ್ಮ ದೋಣಿಯಲ್ಲಿ ಬಂದರು. ಆಗಲೇ ಎರಡು ದೋಣಿಗಳು ನಿಧಾನವಾಗಿ ಹೊರಳಾಡುವ ಜಾರುತ್ತಿರುವ ಮೀನುಗಳಿಂದ ತುಂಬಿಕೊಂಡವು - ಹೀಗೆ ಸಂಪೂರ್ಣವಾಗಿ ತುಂಬಿಹೋದ ದೋಣಿಗಳು ಮುಳುಗುವಷ್ಟು ಅಪಾಯಕ್ಕೆ ಒಳಗಾದವು.[6] ಇವುಗಳು ನಮ್ಮಲ್ಲಿ ಕೆಲವರಿಗೆ ಚಿರಪರಿತವಾಗಿರುವ ಹತ್ತರಿಂದ ಹದಿನೈದು ಅಡಿಯ ರೋಬೋಟುಗಳು ಇವುಗಳಲ್ಲ. ಇವುಗಳು ಗಲಿಲಾಯ ಸಮುದ್ರದಲ್ಲಿ ಬಳಸುವ ಇಪ್ಪತ್ತರಿಂದ ಮೂವತ್ತು ಅಡಿಯ ಕಸಬುದಾರ ಬೆಸ್ತರ ದೋಣಿಗಳು ಆಗಿದ್ದವು. ನಿಪುಣರಾದ ಬೆಸ್ತರು ಇಂಥ ಬೇಟೆ ಯನ್ನು ಎಂದೆಂದೂ ಕಂಡಿರಲಿಲ್ಲ!

ಪೇತ್ರ ಮತ್ತು ಇತರ ಬೆಸ್ತರಿಗೆ ಇಂದೆಂಥ ಕ್ರಾಂತಿಕರವಾದುದಾಗಿತ್ತು! ಇಲ್ಲಿನ ವಿಷಯವು ಮೀನನ್ನು ಹಿಡಿಯುವುದಾಗಿದ್ದರೂ, ತಾನೇನನ್ನು ಮಾತನಾಡುತ್ತಿದ್ದಾನೆ ಎಂದು ನಮ್ಮ ಕರ್ತನು ಬಲ್ಲವನಾಗಿದ್ದನು!

ಹೆಚ್ಚಿನ ಸಮಯ, ಕರ್ತನ ಆಜ್ಞೆಯು ನಮಗೆ ತಿಳುವಳಿಕೆಯನ್ನು ಮೂಡಿಸುವುದಾಗಿದೆ, ಆದರೆ ಅದೇ ಯಾವಾಗಲೂ ವಿಷಯವಾಗಿರ ಬೇಕೆನ್ನುವದಕ್ಕೆ ಯಾವ ಖಚಿತತೆಯು ಅಲ್ಲಿಲ್ಲ.[7]

ಇಲ್ಲಿನ ಪ್ರಶ್ನೆಯು "ಇದು ನನಗೆ ಯೋಗ್ಯವಾದುದೇ" ಎಂಬುದಲ್ಲ. ಹಾಗಿದ್ದಾಗ ನಾವು ಪೇತ್ರ ನಂತೆ ಈ ರೀತಿಯಾಗಿ ಪ್ರತಿಕ್ರಿಯಿಸಬಹುದು "ನೀನು ಹೇಳಿದಂತೆಯೇ ಮಾಡುತ್ತೇನೆ." ನಾವು ವಿಧೇಯರಾಗಿದ್ದಾದರೆ, ಅಂತ್ಯದಲ್ಲಿ ಕರ್ತನ ಮಾರ್ಗವು ಸರಿಯಾದದ್ದು ಎಂದು ನಾವು ಕಂಡುಕೊಳ್ಳಬಹುದು!

ಒಂದು ವೇಳೆ ನೀವು ಯೇಸುವಿನ ಶಿಷ್ಯರಾಗಿದ್ದಾದರೆ ಆತನು ಪ್ರತಿಯೊಂದರ ಒಡೆಯನಾಗಿದ್ದಾನೆ ಮತ್ತು ನೀವು ಆ ನಂಬಿಕೆಯ ಮೇಲೆ ವರ್ತಿಸುವವರಾಗಿರಬೇಕು ಎಂಬುದನ್ನು ನೀವು ಮನವರಿತಿರಲೇ ಬೇಕು.

## ನೀವು ಕೆಲವನ್ನಾದರೂ ಒಪ್ಪಿಕೊಳ್ಳಲೇಬೇಕು (ವಚನಗಳು 8-10)

ಯೇಸು ಮಾಡಿದ ಕೆಲ ಪ್ರಭವಯುತವಾದ ಅದ್ಭುತಕಾರ್ಯಗಳನ್ನು ಪೇತ್ರನು ನೋಡಿದ್ದನು. ಆತನು ನೀರನ್ನು ದ್ರಾಕ್ಷಾರಸವನ್ನಾಗಿ ಪರಿವರ್ತಿಸಿದ್ದನ್ನು ಆತನು ನೋಡಿ ದ್ದನು (ಯೋಹಾನ 2:1-11). ಪ್ರಧಾನನ ಮಗನನ್ನು ಸ್ವಸ್ಥಮಾಡಿದ್ದನು ಆತನು ನೋಡಿ ದ್ದನು (ಯೋಹಾನ 4:46-54). ಕ್ರಿಸ್ತನು ಅನೇಕ ಸೂಚಕಕಾರ್ಯಗಳನ್ನು ಮತ್ತು ಅದ್ಭುತ ಕಾರ್ಯಗಳನ್ನು ಮಾಡುವಾಗ ಅದನ್ನು ಅದ್ಭುತಕಾರ್ಯಗಳನ್ನು ಮಾಡುವಾಗ ಅದನ್ನು ನೋಡಲು ಆತನು ಉಪಸ್ಥಿತನಿದ್ದನು (ಯೋಹಾನ 2:23; 3:2ನ್ನು ನೋಡಿರಿ), ಆದರೆ ಈ ಒಂದು ಅದ್ಭುತಕಾರ್ಯವು ತಟ್ಟಿದ ಹಾಗೆ ಮುಂದೆ ನಡೆದ ಯಾವುದೇ ಅದ್ಭುತಕಾರ್ಯಗಳು ಆತನನ್ನು ತಟ್ಟಲಿಲ್ಲ. ಇದು ಸಿಮೋನನ ಕಸಬನ್ನು ಒಳಗೊಂಡಿದ್ದಂತದ್ದಾಗಿದ್ದು ಆತನು ಜೀವಿಸಿದ ರೀತಿಯನ್ನು ಅದು ಸೂಚಿಸುವುದಾಗಿತ್ತು. ಅದು ಆತನಿಗೆ ಯೇಸು *ಪ್ರತಿಯೊಂದರ* ಕರ್ತನು ಎಂದು ಕಂಡುಕೊಳ್ಳುವುದಕ್ಕೆ ಕಾರಣವಾಯಿತು.

ಪೇತ್ರನು ಹೊಸಬೆಳಕಿನಲ್ಲಿ ಯೇಸುವನ್ನು ಕಂಡಹಾಗೆಯೇ, ತನ್ನನ್ನು ಸಹ ಹೊಸಬೆಳಕಿನಲ್ಲಿ ಆತನು ಕಂಡುಕೊಂಡನು. ತನ್ನ ನ್ಯೂನ್ಯತೆಗಳಿಂದ ಆತನು ಕುಗ್ಗಿಹೋದನು. "ಆತನು ಯೇಸುವಿನ ಮೊಣಕಾಲಿಗೆ ಬಿದ್ದು" ಮೀನುಗಳ ರಾಶಿಯನ್ನು ನೋಡುತ್ತಾ "ಸ್ವಾಮಿ ನಾನು ಪಾಪತ್ಮನು; ನನ್ನನ್ನು ಬಿಟ್ಟುಹೋಗಬೇಕು!" (ವಚನ 8) ಅಂದನು. ದೇವರ ಶಕ್ತಿ ಮತ್ತು ಮಹಿಮೆಯ ಬಗೆಗೆ ಒಮ್ಮಲೆ ವಾಗ್ವಾದ ವಾದಾಗ ಜನರು ಯಾವಾಗಲೂ ಪ್ರತಿಕ್ರಿಯಿಸುವಂತೆಯೇ ಆತನು ಪ್ರತಿಕ್ರಿಯಿಸಿದನು (ಆದಿಕಾಂಡ 18:27; ಯೋಬ 42:4; ಯೆಶಾಯ 6:5).

ನೀವು ಒಂದು ವೇಳೆ ಯೇಸುವಿನ ಶಿಷ್ಯರಾಗಿದ್ದಾದರೆ, ನೀವು ಎರಡು ಸತ್ಯಗಳನ್ನು ಅರಿತುಕೊಳ್ಳಬಹುದು: ಮೊದಲನೆಯದಾಗಿ, ಆತನೇ ಎಲ್ಲವೂ ಆಗಿದ್ದಾನೆ ಎಂದು ನೀವು ಅರಿತುಕೊಳ್ಳಬೇಕು. ಪೇತ್ರನು ತನ್ನ ಪಾಪಗಳನ್ನು ಅರಿಕೆಮಾಡುವಾಗ ಯೇಸುವನ್ನು ಹೇಗೆ ಸಂಬೋಧಿಸಿದನು ಎಂಬುದನ್ನು ನೋಡಿರಿ: ಆತನು ಅವನನ್ನು "ಸ್ವಾಮೀ" ಎಂದು ಕರೆದನು. ಪೌಲನು "ನಿಮಗೆ ರಕ್ಷಣೆಯಾಗಬೇಕಾದರೆ ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಬೇಕೆಂದು" ಹೇಳುತ್ತಾನೆ (ರೋಮಾಪುರ 10:9). ಎರಡನೆಯದಾಗಿ, ಆತನೇ ಎಲ್ಲವೂ ಆಗಿದ್ದಾನೆ ಎಂದು ನೀವು ಒಪ್ಪಿಕೊಂಡಿದ್ದಾದರೆ ನೀನು ಏನೂ ಆಗಿಲ್ಲವೆಂದು ಒಪ್ಪಿಕೊಳ್ಳುವವರಾಗಿರಬೇಕು. ಆತನಿಗಾಗಿ ನಿಮಗಿರುವ ಅವಶ್ಯಕತೆಯನ್ನು ನೀನು ಒಪ್ಪಿಕೊಳ್ಳಬೇಕು.

"ತನ್ನ ತನದಿಂದ ತುಂಬಿದ"[8] ಒಬ್ಬ ಮನುಷ್ಯನು ಕರ್ತನಿಗಾಗಿ ಯಾವ ಕೋಣೆಯನ್ನು ಹೊಂದಿರುವದಿಲ್ಲ. "ಕರ್ತನೇ ನಾನೆಷ್ಟು ಒಳ್ಳೆಯವನು ನೋಡು! ನಾನೆಷ್ಟು ಜಾಣನು, ಎಷ್ಟು ಕೌಶಲವುಳ್ಳವನು, ಎಂಥ ಯಶಸ್ವಿಯುಳ್ಳ ಮನುಷ್ಯನು ನೋಡು! ನಾನು ಸಾಧಿಸಿದ್ದೆಲ್ಲದಕ್ಕೂ ನೀನು ನನ್ನನ್ನು ಶ್ಲಾಘಿಸುವಿ ಎಂದು ನಾನು ಬಯಸುವವನಾಗಿದ್ದೇನೆ!" ಎಂದು ಹೇಳು ವವರನ್ನು ಯೇಸು ಬಳಸಿಕೊಳ್ಳಲಾರನು. ಆತನ ಕಾಲುಗಳ ಮೇಲೆ ಬಿದ್ದು ತಮ್ಮ ಬಲ

ಹೀನತೆಯನ್ನು ಮತ್ತು ಆತನ ಮೇಲಿನ ಆತುಕೊಳ್ಳುವಿಕೆಯನ್ನು ಅರಿಕೆಮಾಡಿಕೊಳ್ಳುವವರನ್ನು ಮಾತ್ರ ಯೇಸು ಬಳಸಿಕೊಳ್ಳುವವನಾಗಿದ್ದಾನೆ. ಮತ್ತೊಬ್ಬರ ಮಾತನ್ನು ಎರವಲು ಪಡೆಯಲು "ದೇವರೇ ಪಾಪಿಯಾದ ನನ್ನನ್ನು ಕರುಣಿಸು" (ಲೂಕ 18:13ಬಿ; KJV) ಎಂದು ಹೇಳಲು ನೀನು ಸಿದ್ಧನಾಗಿರಲೇಬೇಕು.

## ನೀನು ಕೆಲವನ್ನು ಬದಲಾಯಿಸಲೇಬೇಕು (ವಚನ 10)

ಕಂದಕವು ತನ್ನನ್ನು ಮತ್ತು ಯೇಸುವನ್ನು ಬೇರ್ಪಡಿಸುತ್ತಿರುವುದನ್ನು ಕಂಡ ಪೇತ್ರನು "ನನ್ನನ್ನು ಬಿಟ್ಟು ಹೋಗಬೇಕು" ಎಂದು ಹೇಳಿದನು (ವಚನ 8). ಅದೃಷ್ಟವಶಾತ್, ಯೇಸು ಆತನ ಭಿನ್ನಹವನ್ನು ಸಂಪೂರ್ಣಗೊಳಿಸಲಿಲ್ಲ. ಬದಲಾಗಿ ಯೇಸು ಪೇತ್ರನನ್ನು ವಿಶೇಷವಾದ ಸವಾಲಿನ ಹತ್ತಿರಕ್ಕೆ ತಂದನು. ಯೇಸು "ಸಿಮೋನನಿಗೆ ಅಂಜಬೇಡ ನೀನು ಮನುಷ್ಯರನ್ನು ಹಿಡಿಯುವವನಾಗಿರುವಿ ಎಂದು ಹೇಳಿದನು" (ವಚನ 10). ವರ್ತಮಾನಕಾಲದಲ್ಲಿರುವ "ಹಿಡಿಯುವ" ಎಂಬ ಪದವು ನಿರಂತರವಾದ ಕ್ರಿಯೆಯನ್ನು ಒಳಗೊಂಡಿರುವುದನ್ನು ಸೂಚಿಸುವುದಾಗಿದೆ. ಇದು ಯಾವಾಗಲೂ ಒಂದು ಸಾರಿ ಮಾಡುವ ಸಾಹಸವಲ್ಲ, ಆದರೆ ಜೀವನದುದ್ದಕ್ಕೂ ಇರುವ ಉದ್ಯೋಗವಾಗಿದೆ. "ಹಿಡಿಯುವ" ಎಂಬುದರ ಗ್ರೀಕ್ ಭಾಷಾಂತರವು ಅಕ್ಷರಸಹ "ಸಜೀವವಾಗಿ ಹಿಡಿಯುವದು"[9] ಎಂದಾಗಿದೆ. "ಜಗತ್ತಿಗೆ ಜೀವವನ್ನು ಕೊಡುವ" ಜನರನ್ನು ಅವರು ಯೇಸುವಿನ ಬಳಿಗೆ ತರುವವರಾಗಿದ್ದರು (ಯೋಹಾನ 6:33). "ನನ್ನ ಹಿಂದೆ ಬನ್ನಿರಿ ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು" ಎಂಬ ಕರೆಯನ್ನು ಮತ್ತಾಯನು ದಾಖಲಿಸಿದ್ದಾನೆ (4:19; ನೋಡಿರಿ ಮಾರ್ಕ 1:17).

ಪೇತ್ರನಿಗೆ ಕೊಟ್ಟ ಸವಾಲು ಆತನ ಜೀವಿತದ ಮೇಲೆ ಪ್ರವರ್ತಿಸುವುದಾಗಿದೆ. ಆತನು ಮೀನನ್ನು ಹಿಡಿಯುವುದರಲ್ಲಿ ತೊಡಗಿಸಿಕೊಂಡಿದ್ದನು; ಈಗ ಆತನ ಜೀವಿತವು ಮನುಷ್ಯರನ್ನು ಹಿಡಿಯುವ ಕಾರ್ಯಕ್ಕೆ ಕೇಂದ್ರವಾಯಿತು.

ಒಕ್ಕಲಿಗರಿಗೆ ದೇವರಾಜ್ಯದ ಬೀಜವನ್ನು (ದೇವವಾಕ್ಯ; ಲೂಕ 8:11)[10] ಬಿತ್ತುವುದಕ್ಕೆ ಯೇಸು ಕರೆಯನ್ನು ಕೊಟ್ಟನು. "ಮುತ್ತಿನ ಬಹುಬೆಲೆಯನ್ನು" (ಮತ್ತಾಯ 13:46; ಸುವಾರ್ತೆ) ಹೇಳಲು ಯೇಸು ವ್ಯಾಪಾರಿಗಳನ್ನು ಕರೆದನು. ತನ್ನ ಮನೆಯನ್ನು ಸೇರಿಸಲು (ಸಭೆಯನ್ನು; ನೋಡಿರಿ ಮತ್ತಾಯ 16:18; 1 ತಿಮೋಥೆ 3:15; KJV) ಯೇಸು ಬಡಗಿಗಳನ್ನು ಕರೆದನು. ಆತ್ಮಗಳನ್ನು ಸ್ವಸ್ಥಮಾಡುವ (ಯೋಹಾನ 12:40) ಶ್ರೇಷ್ಟ ವೈದ್ಯನೊಡನೆ ಕೆಲಸಮಾಡಲು ಯೇಸು ವೈದ್ಯರನ್ನು ಕರೆದನು. ನಿನ್ನ ಜೀವಿತದ ಉದ್ಯೋಗ ಅಥವಾ ಅಭಿರುಚಿ ಏನೇ ಆಗಿರಲಿ ನೀನು ಯೇಸುವಿನ ಶಿಷ್ಯನಾಗಿದ್ದಾದರೆ ನಿನ್ನ ಜೀವಿತದಲ್ಲಿ ಬದಲಾವಣೆಯು ಇರುವುದಾಗಿರುತ್ತದೆ. ನಿನ್ನ ಜೀವಿತದ ಕೇಂದ್ರವನ್ನು ನೀನು ಬದಲಾಯಿಸಿದಾಗ, ಒತ್ತು ಕೊಡುವಿಕೆಯಲ್ಲಿ ಮತ್ತು ಆದ್ಯತೆಯಲ್ಲಿ ಬದಲಾವಣೆಯು ಇರುವುದಾಗಿರುತ್ತದೆ.

Floyd Schubert, ಎಂಬ ನನ್ನೊಬ್ಬ ಸ್ನೇಹಿತನು, ಒಂದು ಯಶಸ್ವಿ ಶಾಲಾ ಸಾಮುಗ್ರಿ - ಒದಗಿಸುವ ಕಂಪನಿಯನ್ನು ಹೊಂದಿದ್ದನು. ಆತನ ಡೆಸ್ಕಿನಲ್ಲಿ ಈ ರೀತಿಯಾದ ಚಿಹ್ನೆಯು ಇತ್ತು: "ಉದ್ಯೋಗವು ದೇವರಿಗೆ ಮಾಡುವುದಾಗಿದೆ ನಾವು ಪೆನ್ಸಿಲ್‌ನ್ನು ಮಾರುವುದರ ಮೂಲಕ ನಾನು ಬಿಲ್ಲನ್ನು ಪಾವತಿಸುತ್ತೇನೆ."

## ನೀವು ಕೆಲವನ್ನಾದರೂ ಬಿಡಬೇಕು (ವಚನ 11)

ಈಗಾಗಲೇ ಪೇತ್ರನು ಯೇಸುವಿನೊಡನೆ ಪ್ರಯಾಣಿಸಿದ್ದನು ಎಂಬುದು ಹೇಳಲ್ಪಟ್ಟಿದೆ. ಆತನ ಸ್ನೇಹಿತರೂ ಕೂಡಾ. ಈಗ ಯೇಸು, ತನ್ನನ್ನು ಪೂರ್ಣಪ್ರಮಾಣದಲ್ಲಿ ಹಿಂಬಾಲಿಸುವಂತಹ[11] ಹೊಸಮಟ್ಟದ ಶಿಷ್ಯತ್ವಕ್ಕೆ ಅವರನ್ನು ಕರೆಯುತ್ತಿದ್ದಾನೆ. ಇದನ್ನು

ಮಾಡಲು, ಅವರು ತಮ್ಮ ದೋಣಿಗಳನ್ನು, ಬಲೆಗಳನ್ನು ಮತ್ತು ಮೀನನ್ನು ಬಿಡಬೇಕಿತ್ತು. ಅವರಿಗೆ ಬಲು ಮಹತ್ವವಾಗಿರುವಂತಹದನ್ನು ಅವರು ಪರಿತ್ಯಜಿಸಬೇಕಿತ್ತು. ಉತ್ತಮ ಆದಾಯ ಮತ್ತು ಆರ್ಥಿಕ ಭದ್ರತೆಯನ್ನು ಅವರು ತೊರೆಯಬೇಕಿತ್ತು.

ಪ್ರತಿಯೊಂದು ಸೂಚನೆಯಂತೆ ಈ ವ್ಯಕ್ತಿಗಳ ಮೀನು ಉದ್ಯೋಗವು ಯೋಗ್ಯ ಪ್ರಮಾಣದಲ್ಲಿ (ಆರ್ಥಿಕವಾಗಿ) ಇತ್ತು. ಪಾಲುದಾರರು ಒಂದಕ್ಕಿಂತ ಹೆಚ್ಚಿನ ದೋಣಿಗಳನ್ನು ಹೊಂದಿದ್ದರು ಎಂದು ನಾವು ಈಗಾಗಲೇ ನೋಡಿದ್ದೇವೆ. ಯಾಕೋಬ ಮತ್ತು ಯೋಹಾನರು ಸೇವಕನ್ನು ಇಟ್ಟುಕೊಂಡಿದ್ದರು (ಮಾರ್ಕ 1:20). ಯಾಕೋಬ ಮತ್ತು ಯೋಹಾನರ ತಾಯಿಯು ಯೇಸುವಿಗೆ ಮತ್ತು ಆತನ ಶಿಷ್ಯರಿಗೆ ನಂತರದಲ್ಲಿ ಆರ್ಥಿಕವಾಗಿ ಸಹಾಯ ಮಾಡುತ್ತಿದ್ದ ಮಹಿಳೆಯರಲ್ಲಿ ಒಬ್ಬಳಾಗಿದ್ದಳು (ಮತ್ತಾಯ 27:55, 56; ಲೂಕ 8:3). ಯೋಹಾನನು ಹಿರಿಯ ಯಾಜಕನೆಂದು ಕರೆಯಲ್ಪಡುತ್ತಿದ್ದನು (ಯೋಹಾನ 18:15); ಆತನು ಮತ್ತು ಆತನ ಕುಟುಂಬದವರು ಧಾರ್ಮಿಕ ಅಧಿಕಾರಿಗಳೊಂದಿಗೆ ವ್ಯವಹಾರ ವಿಷಯಗಳನ್ನು ಹೊಂದಿದ್ದರು. ಈಗ ಅವರ ಬಲು ಲಾಭದಾಯಕ ಆ ಉದ್ಯೋಗವನ್ನು ಬಿಟ್ಟು ಬಿಡಬೇಕಾಗಿದೆ.

ಇದು ಅವರಿಂದ ಅತಿಯಾಗಿ ಅಪೇಕ್ಷಿಸುವುದಾಗಿತ್ತು ಎಂದು ಕೂಡ ಅವರು ಯೋಚಿಸಲಿಲ್ಲ. ವಚನ 11ರಲ್ಲಿ ನಾವು ಓದುವಂತೆ, "ಅವರು ತಮ್ಮ ದೋಣಿಯನ್ನು ದಡಕ್ಕೆ ತಂದು ಎಲ್ಲವನ್ನು ಬಿಟ್ಟು ಆತನನ್ನು ಹಿಂಬಾಲಿಸಿದರು." ಪೇತ್ರ ಮತ್ತವನ ಸಹೋದರನಾದ ಆಂದ್ರೆಯನು "... ಹೇಳುತ್ತಲೇ ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು" (1:18) ಮತ್ತು ಯಾಕೋಬ ಯೋಹಾನರು "ತಮ್ಮ ತಂದೆಯಾದ ಜೆಬೆದಾಯನನ್ನು ಕೂಲಿಯಾಳುಗಳ ಸಂಗಡ ದೋಣಿಯಲ್ಲಿ ಬಿಟ್ಟು ಆತನ ಹಿಂದೆ ಹೋದರು" (ವಚನ 20) ಎಂದು ಮಾರ್ಕನು ಹೇಳುತ್ತಾನೆ.

"ಆದರೆ ಕರ್ತನಿಗೆ ಆ ಎಲ್ಲಾ ಶಿಷ್ಯರ ಅವಶ್ಯಕತೆಯು ಇರಲಿಲ್ಲ" ಎಂಬ ಕೆಲ ವಿರೋಧಗಳನ್ನು ನಾವು ಕೇಳುತ್ತೇನೆ. ಲೂಕ 14ರಲ್ಲಿ ಭಾವ ಹಿಂಬಾಲಕರ ಗುಂಪಿಗೆ "ನಿಮ್ಮಲ್ಲಿ ಯಾವನೇ ಆಗಲೀ ತನಗಿರುವುದೆಲ್ಲವನೆಲ್ಲಾ ಬಿಟ್ಟುಬಿಡದೆ ಹೋದರೆ ಅವನು ನನ್ನ ಶಿಷ್ಯನಾಗಲಾರನು" (ವಚನ 33) ಎಂದು ಯೇಸು ಹೇಳಿದನು. ಲಾಭದಾಯಕನಾದ ಉದ್ದಿನೆಯನ್ನು ಮತ್ತು ಉತ್ತಮ ಸಂಬಂಳದ ಉದ್ಯೋಗವನ್ನೂ ಬಿಟ್ಟುಬಿಟ್ಟು - ದೇವರ ವಾಕ್ಯವನ್ನು ಹೇಗೆ ಕಲಿಸಬೇಕೆಂದು ಮತ್ತು ಬೋಧಿಸಬೇಕೆಂದು ತಿಳಿಯಲು ಶಾಲೆಗೆ ಬರಲು ಆ ಜನರು ತಾವು ಹೊಂದಿದೆಲ್ಲವನ್ನೂ ಮಾರಿ ಅನೇಕ ಜನರನ್ನು ಅನೇಕ ಬೋಧನಾ ತರಬೇತಿಯ ಶಾಲೆಗಳಲ್ಲಿ ಕೆಲಸಮಾಡಿದ ನಾನು ಬಲ್ಲವನಾಗಿದ್ದೇನೆ.

"ಆದರೆ ಪೂರ್ಣಪ್ರಮಾಣದ ಬೋಧಕರಾಗುವ ಯೋಜನೆಯನ್ನು ಹೊಂದಿಲ್ಲದಂತಹ ನಮ್ಮಂತವರ ಬಗೆಗೆ ಏನು?" ಎಂದೂ ವಿರೋಧಿಗಳು ಕೇಳುತ್ತಾರೆ. ನೀವು ಇನ್ನೂ ಸಹ "ಕೆಲವನ್ನಾದರೂ ಬಿಡುವ" ಇಚ್ಛೆಯುಳ್ಳವರಾಗಿರಬಹುದು; ನಿನ್ನ ಮತ್ತು ಕರ್ತನಿಗೆ ಸಂಪೂರ್ಣ ಹೃದಯದ ಸೇವೆಯ ಮಧ್ಯ ನಿಲ್ಲುವಂತಹ ಯಾವುದನ್ನೂ ಬಿಟ್ಟುಕೊಡುವ ಅವಶ್ಯಕತೆಯು ನಿನಗಿದೆ.[12] ಮತ್ತಾಯ 16:24ರಲ್ಲಿ ಯೇಸು "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು *ತನ್ನನ್ನು ನಿರಾಕರಿಸಿ* ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ." (ಒತ್ತಿ ಹೇಳಿದ್ದು ನನ್ನದು.)

ಏನೇ ಆಗಲಿ, ನಿನ್ನ ಕಾಳಜಿಯನ್ನು ತೆಗೆದುಕೊಳ್ಳುವ ಕರ್ತನ ಮೇಲೆ ವಿಶ್ವಾಸಿಸಲೂ ಸಹ ನೀವು ಒಪ್ಪಬಹುದಾಗಿದೆ. ಪೇತ್ರನ ಹಾಗೆ, ಆಂದ್ರೇಯ, ಯಾಕೋಬ ಮತ್ತು ಯೋಹಾನರೂ ಗಲಿಲಾಯ ಸಮುದ್ರದಿಂದ ಹೊರಗೆ ಯೇಸುವನ್ನು ಹಿಂಬಾಲಿಸಿದರು, ಆತನು ಮೀನುಗಳನ್ನು ಒದಗಿಸಿದ ಹಾಗೆಯೇ ಅವರ ಅವಶ್ಯಕತೆಗಳನ್ನು ಪೂರೈಸುವನು ಎಂದು ಅವರು ಆತನಲ್ಲಿ ವಿಶ್ವಾಸವಿಟ್ಟಿದ್ದರು. "ನಾನು ಕ್ರೈಸ್ತನಾಗುವ ಮುಂಚೆ ನಾನು ಮಾಡುತ್ತಿದ್ದ ಕೆಲಸವನ್ನು

ಬಿಟ್ಟುಬಿಟ್ಟಿದ್ದಾದರೆ ನಾನು ಜೀವಿಸಲು ಏನನ್ನೂ ಮಾಡಲಾರೆನು! ನನ್ನ ಕುಟುಂಬವು ಹಸಿವೆಯಿಂದ ಸಾಯುತ್ತದೆ" ಎಂದು ಹೇಳುವ ಜನರನ್ನೂ ನಾನು ಬಲ್ಲೆನು. ನಾನು ಆತನನ್ನು ಮತ್ತು ಆತನ ಮಾರ್ಗವನ್ನು ಮೊದಲು ಇಟ್ಟುಕೊಂಡಿದ್ದಾದರೆ ಜೀವಿತದ ಎಲ್ಲ ಅವಶ್ಯಕತೆಗಳನ್ನು ಹೊಂದುವವರಾಗಿರುತ್ತೇವೆ (ಮತ್ತಾಯ 6:33). "ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು" ಎಂದು ಪೌಲನು ಬರೆಯುತ್ತಾನೆ (ಫಿಲಿಪ್ಪಿ 4:19).[13]

ಒಂದು ಸಾರಿ ಪೇತ್ರನು ಯೇಸುವಿಗೆ "ಇಗೋ ನಾವು ಎಲ್ಲವನ್ನೂ ಬಿಟ್ಟುಬಿಟ್ಟು ನಿನ್ನನ್ನು ಹಿಂಬಾಲಿಸಿದ್ದೇವೆ" ಎಂದು ಹೇಳಿದನು (ಮಾರ್ಕ 10:28). ಆಗ ಯೇಸು ಆತನಿಗೆ ಭರವಸೆಯನ್ನು ಕೊಟ್ಟನು:

> ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನು ನನ್ನ ನಿಮಿತ್ತವೂ ಸುವಾರ್ತೆಯ ನಿಮಿತ್ತವೂ ಮನೆಯನ್ನಾಗಲೀ ಅಣ್ಣತಮ್ಮಂದಿರನ್ನಾಗಲಿ ಬಿಟ್ಟುಬಿಟ್ಟಿರುವನೋ ಅವನಿಗೆ ಈಗಿನ ಕಾಲದಲ್ಲಿ ಮನೆ ಅಣ್ಣತಮ್ಮ ಅಕ್ಕ ತಂಗಿ ತಾಯಿ ಮಕ್ಕಳು ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕುತ್ತದೆ; ಮತ್ತು ಮಂದಣ ಲೋಕದಲ್ಲಿ ನಿತ್ಯಜೀವ ವನ್ನು ದೊರೆಯುವದು (ವಚನಗಳು 29, 30).

ಕ್ರಿಸ್ತನ ಶಿಷ್ಯನಾಗಲು ನೀನು ಏನನ್ನು ಬಿಟ್ಟಿದ್ದರೂ ಸರಿ, ಕರ್ತನಿಗಾದ ಔದರ್ಯದಲ್ಲಿ ನಿನ್ನನ್ನು ಮೀರಿದವರಿಲ್ಲ.

## ನೀನು ಕೆಲವನ್ನಾದರೂ ಮಾಡಲೇಬೇಕು (ವಚನ 11)

ಯೇಸುವಿನ ಶಿಷ್ಯನಾಗಲು ಇನ್ನೊಂದು ಕೊನೆಯ ಅವಶ್ಯಕತೆಯನ್ನು ಸೂಚಿಸುವದು ನಮಗೆ ಅವಶ್ಯವಿದೆ. "ಶಿಷ್ಯ" ಪದದಲ್ಲಿ ಮತ್ತು ನಾವು ಈಗಾಗಲೇ ವೇದಭಾಗದಲ್ಲಿ ನೋಡಿ ರುವ ಇದು ಅವಶ್ಯಕ್ತವಾದ ಈ ನಿಶ್ಚಿತವಾದ ಅವಶ್ಯಕತೆಯಾಗಿದೆ - ಆದರೆ "ನೀವು ಏನನ್ನಾದರೂ ಮಾಡಲೇಬೇಕು" ಎಂದು ಇದು ಸೂಚಿಸುವುದಾಗಿರಲೇಬೇಕು. ವಿಶೇಷ ವಾಗಿ ನೀವು ಆತನನ್ನು *ಹಿಂಬಾಲಿಸಲೇಬೇಕು.* ಪೇತ್ರ ಮತ್ತು ಯೋಹಾನರು "ಎಲ್ಲವನ್ನೂ ಬಿಟ್ಟು ಆತನನ್ನು *ಹಿಂಬಾಲಿಸಿದರು*" ಎಂದು ಹೇಳುತ್ತದೆ (ವಚನ 11; ಒತ್ತಿ ಹೇಳಿದ್ದು ನನ್ನದು). ಮತ್ತಾಯ ಮತ್ತು ಮಾರ್ಕರು ನಾಲ್ಕು ಜನರು ತಮ್ಮ ಬಲೆಗಳ್ಳು ಮತ್ತು ದೋಣಿಗಳನ್ನು ಬಿಟ್ಟು "ಮತ್ತು ಆತನನ್ನು *ಹಿಂಬಾಲಿಸಿದರು*" (ಮತ್ತಾಯ 4:20, 22; ಮಾರ್ಕ 1:18, 20; ಒತ್ತಿ ಹೇಳಿದ್ದು ನನ್ನದು). "ಯಾವನಿಗಾದರೂ ನನ್ನ ಹಿಂದೆ ಬರುವುದಕ್ಕೆ ಮನಸ್ಸಿದ್ದರೆ ಅವನು ... ತನ್ನ ಶಿಲುಬೆಯನು ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಮತ್ತಾಯ 16:24; ಒತ್ತಿ ಹೇಳಿದ್ದು ನನ್ನದು).

ಯೇಸುವನ್ನು ಹಿಂಬಾಲಿಸುವದು ಪೇತ್ರ ಮತ್ತಿತರರಿಗೆ ಸುಲಭ ಸಾಧ್ಯವೇ ನಾಗಿರಲಿಲ್ಲ. ಶಿಷ್ಯರು ಪ್ರಯಾಸವನ್ನು ದ್ವೇಶವನ್ನೂ ಮತ್ತು ಪ್ರತ್ಯಕ್ಷವಾಗಿ ಮರಣವನ್ನೂ ಕೂಡಾ ಅನುಭವಿಸಿದರು. ಹಾಗಿದ್ದಾಗ್ಯೂ, ಅವರು ತಮ್ಮನ್ನು ಅದಕ್ಕೆ ಒಪ್ಪಿಸಿಕೊಂಡರು. ಅವರು ಯಾವ ಮಾರ್ಗದಲ್ಲಿ ನಡೆಯಬೇಕೆಂದು ಯೇಸು ಬಯಸಿದ್ದನೋ ಅದೇ ಮಾರ್ಗದಲ್ಲಿ ನಡೆಯಬೇಕೆಂದು ಯೇಸು ಬಯಸಿದ್ದನೋ ಅದೇ ಮಾರ್ಗದಲ್ಲಿ ಅವರು ಹಿಂಬಾಲಿಸಿದರು.[14]

ನಿಮ್ಮಲ್ಲಿ ಕೆಲವರು ಎಲ್ಲರೂ ಯೇಸುವಿನ ಶಿಷ್ಯರಾಗಿರಲಿಕ್ಕಿಲ್ಲ "... ನೀವು ಯೇಸುವನ್ನು ನಿಮಗಾಗಿ ತನ್ನ ಪ್ರಾಣವನ್ನು ಕೊಟ್ಟವನು, ನಿಮ್ಮನ್ನು ನಿಮ್ಮ ಪಾಪದಿಂದ ರಕ್ಷಿಸುವವನು ಎಂದು ನಂಬುವದು ಅವಶ್ಯವಿದೆ" (ಯೋಹಾನ 8:24). ರಕ್ಷಣೆಯನ್ನು ಹೊಂದಲು (ಮಾರ್ಕ 16:16; ನೋಡಿರಿ ಮತ್ತಾಯ 28:18) ಒಡೆಯನ ಆಜ್ಞೆಯು ನನ್ನದಲ್ಲ ಏನೆಂದರೆ ನಂಬು

ಮತ್ತು ದಿಕ್ಷಾಸ್ನಾನಹೊಂದು (ನೀರಿನಲ್ಲಿ ಮುಳುಗುವದು) ಎಂದಾಗಿದೆ. ಒಂದು ವೇಳೆ ನೀನು ಕ್ರೈಸ್ತನಾಗಿದ್ದಾದರೆ, ನಿನ್ನ ಜೀವನದದ್ದಕ್ಕೂ ಆತನನ್ನು ಹಿಂಬಾಲಿಸುವದು ನಿನಗೆ ಅವಶ್ಯವಿದೆ. "ಆತನ ಹೆಜ್ಜೆಜೋಡಿನಲ್ಲಿ ನಡೆಯಬೇಕೆಂದು" ಎಂದು ಆತನು ಮಾದರಿ ತೋರಿಸಿದನು (1 ಪೇತ್ರ 2:21). ಇದು ಯಾವಾಗಲೂ ಸುಲಭಸಾಧ್ಯವಲ್ಲ (ಅಪೊಸ್ತಲರ ಕೃತ್ಯಗಳು 14:22), ಆದರೆ ಇದು ಶಿಷ್ಯರಾಗುವುದಕ್ಕಾಗಿನ "ಕನಿಷ್ಟ ಪಕ್ಷದ ಅವಶ್ಯಕತೆಯು" ಆಗಿದೆ.

## ಮುಕ್ತಾಯ

ಶಿಷ್ಯರಾಗುವುದಕ್ಕಾಗಿನ ಅನೇಕ ಅವಶ್ಯಕತೆಗಳನ್ನು ನಾವು ನೋಡಿದೆವು.

ನಾವು ಕೆಲಸಂಗತಿಗಳನ್ನು ಕಲಿತೆವು: ನಾವು ವಾಕ್ಯದ ವಿದ್ಯಾರ್ಥಿಗಳಾಗಿರಬೇಕು.

ನಾವು ಕೆಲವನ್ನು ಒಪ್ಪಿಕೊಳ್ಳಬೇಕು: ನಾವು ನಮ್ಮ ಸ್ವಂತದ ಅಸಮರ್ಪಕತೆ ಮತ್ತು ಯೇಸುವಿನ ಮೇಲೆ ನಮ್ಮ ಆತುಕೊಳ್ಳುವಿಕೆಯನ್ನು ಒಪ್ಪಿಕೊಳ್ಳಬೇಕು.

ನಾವು ಕೆಲವನ್ನು ಬದಲಾಯಿಸಬೇಕು: ನಾವು ನಮ್ಮ ಜೀವಿತದ ಉದ್ದೇಶಗಳನ್ನು ಸರಿಪಡಿಸಿಕೊಳ್ಳಬೇಕು: ನಾವು ದೇವರ ಮಹಿಮೆಗೋಸ್ಕರವಾಗಿ ಜೀವಿಸಬೇಕು ಮತ್ತು ಇತರರನ್ನು ಆತನ ಬಳಿಗೆ ತರಬೇಕು.

ನಾವು ಕೆಲವನ್ನು ಬಿಟ್ಟು ಬಿಡಬೇಕು: ಸಂಪೂರ್ಣಹೃದಯದ ಸೇವೆ, ಮತ್ತು ಕರ್ತನಲ್ಲಿ ವಿಶ್ವಾಸವಿಡುವುದಕ್ಕೆ ಸಿದ್ಧವಾಗುವುದರಿಂದ ದೂರವಿರುವಿಸುವ ಯಾವುದನ್ನೂ ಬಿಡುವುದಕ್ಕೆ ನಾವು ಸಿದ್ಧರಾಗಿರಬೇಕು.

ನಾವು ಕೆಲವನ್ನು ಮಾಡಬೇಕು: ಆತನು ನಾವು ಎಲ್ಲಿ ಹೋಗಬೇಕೆಂದು ಬಯಸುತ್ತಾನೋ ಅಲ್ಲಿಗೆ ನಾವು ಆತನನ್ನು ಹಿಂಬಾಲಿಸಬೇಕು.

ಶಿಷ್ಯರಾಗಿರುವುದಕ್ಕಾಗಿ ಯಾವುದು ತೆಗೆದುಕೊಂಡು ಹೋಗುವದೋ ಅದನ್ನು ನೀನು ಹೊಂದಿದ್ದೀಯಾ?[15]

---

ಟಿಪ್ಪಣೆಗಳು

[1]"ಕಲಿ" ಈ ಪದದ ಗ್ರೀಕ್ ಸಂಯುಕ್ತ ಪದದ ರೀತಿಯು ಎಂಬ ಕೊನೆಯನ್ನು ಹೊಂದಿದ್ದು "ಕಲಿಯುವ ಒಬ್ಬನನ್ನು" ಸೂಚಿಸುವಂತದ್ದಾಗಿದೆ, ನೀವು ಬಯಸುವುದಾದರೆ "ಶಿಷ್ಯರಾಗುವುದಕ್ಕಾಗಿರುವ ಅರ್ಥವನ್ನು ಕಲಿಯುದಕ್ಕಾಗಿ ಅನೇಕ ಪರಿಚ್ಛೇದಗಳ ಮೂಲಕ ನಾವು ಹೋಗಬೇಕಾಗಿದೆ" ಎಂದು ನಾವು ಹೇಳಬಹುದು. [2]ಯೋಹಾನ 13:35 ಮತ್ತು ಯೋಹಾನ 15:8ರ ಹಾಗೆ ನೀವು ಹಿಂದಿನ ವಾಕ್ಯ ವೃಂದಗ ಳನ್ನು ಓದಬಹುದು ಅಥವಾ ಪಟ್ಟಿಯಾದ ಪರಿಚ್ಛೇದಗಳನ್ನು ಇನ್ನೂ ಮುಂತಾದವುಗಳನ್ನು ವ್ಯಾ ಖ್ಯಾನಿ ಸಬಹುದು. ನಂತರ ನೀವು "ಹೇಗೋ, ನಮ್ಮ ಈ ಪ್ರಸ್ತುತ ಪಾಠಕ್ಕಾಗಿ ಲೂಕ 5:1-11ನ್ನೇ ಮೂಲವಾಗಿ ಇಟ್ಟುಕೊಳ್ಳುವಾ" ಎಂದು ಸೇರಿಸಬಹುದು. [3]ಲೂಕನು ಗಲಿಲಾಯ ಸಮುದ್ರವನ್ನು ಅದರ ಇನ್ನೊಂದು ಹೆಸರಾದ "ಗೆನೆಜರೇತ್ ಕೆರೆ" ಎಂಬುದರಿಂದ ಕರೆದಿದ್ದಾನೆ. ಈ ಪುಸ್ತಕದ ಉಪವಿಭಾಗದಲ್ಲಿ "ಗಲಿಲಾಯ ಸಮುದ್ರ" ಎಂಬುದನ್ನು ನೋಡಿರಿ. [4]ವಚನ 8ರಲ್ಲಿ ಈ ಪದವು ಯೇಸುವನ್ನು ಉದ್ದೇಶಿಸುವುದಕ್ಕೆ ಬಳಸಲ್ಪಟ್ಟಿದೆ. [5]ನೂರಾರು ಬೆಸ್ತರು ಸಮುದ್ರದಲ್ಲಿ ಮೀನು ಹಿಡಿಯುತ್ತಿದ್ದರು. [6]ವಚನ 7 ಹೇಳುವಂತೆ ದೋಣಿಯು "ಮುಳುಗಲು ಬಂದಿತು" ಎಂದಿದೆ, ಆದರೆ ನಿಜವಾಗಿ ಅವರು ಮುಳುಗಲಿಲ್ಲ. ಬೆಸ್ತರು ತಮ್ಮ ಭಾರವನ್ನು ತಮ್ಮಲ್ಲಿ ಹಂಚಿಕೊಂಡಿರಬಹುದು ಅಥವಾ ಬದಲಿ ವ್ಯವಸ್ಥೆಯನ್ನು ಮಾಡಿಕೊಂಡಿರಬಹುದು. [7]ಅರ್ಥರಹಿತವಾಗಿರುವ ಇನ್ನೂ ಕೆಲ ಉದಾಹರಣೆಗಳನ್ನು ಕೊಡಬಹುದು: ಯೆರಿಕೋವಿನ ಗೋಡೆಯ ಸುತ್ತುವದು ಅಥವಾ ಯೋರ್ದನ್ ಹೊಳೆಯಲ್ಲಿ ಏಳುಸಾರಿ ಮುಳುಗಿ ಏಳುವದು. ಕೆಲವುಗಳಲ್ಲಿ ವಾರದ ಮೊದಲ ದಿನದಲ್ಲಿ ನೀರಿನಲ್ಲಿ ಮುಳುಗಿಸುವಂಥ ದೀಕ್ಷಾಸ್ನಾನದ ಅಥವಾ ಕರ್ತನ ಮಹೋನ್ನತಿಯನ್ನು ಮಾತನಾಡುವ ಅವಶ್ಯಕತೆಯು ಅನುಚಿತವಾಗಿ ಕಂಡುಬರುತ್ತದೆ. [8]"ತನ್ನನ್ನು ಸಂಪೂರ್ಣವಾಗಿ" ಎಂಬ ವಿವರಣೆಯ ಅರ್ಥವು "ಗರ್ವದಿಂದ ತುಂಬಿದ್ದಾಗಿದೆ." ಇದು ಸ್ವಯಂಸ್ಪಷ್ಟೀಕೃತ ಎಂದು ನಾನು ಯೋಚಿಸುವಾಗ,

ನೀವು ಇರುವೆಡೆ ಸಮಾನವಾದ ಬಳಿಕೆಯಾಗುವ ವಿವರಣೆಯನ್ನು ಬಳಸಲು ನೀವು ಸೂಚಿಸಬಹುದು. [9]ನನ್ನ ಇಂಟರ್‌ಲೈನರ ಬೈಬಲ್‌ನಲ್ಲಿ ಗ್ರೀಕ್‌ನ ಅಕ್ಷರಶ ಭಾಷಾಂತರವು "ಕುಸಿದು ಬೀಳುವ ಮನುಷ್ಯರಲ್ಲಿ ಚಟುವಟಿಕೆಗೆ ತರುವುದಾಗಿದೆ" ಎಂದಿದೆ. [10]ಕೆಲ ಸಾಮಾನ್ಯ ವೃತ್ತಿಗಳ ಪಟ್ಟಿಯು ನನ್ನ ಜಗತ್ತಿನ ಭಾಗವಾಗಿವೆ ನಿಮ್ಮ ಜಗತ್ತಿನ ಭಾಗವಾದ ವೃತ್ತಿಗೆ ಇದನ್ನು ಸೇರಿಸಿಕೊಳ್ಳಿರಿ.

[11]"ಗಲಿಲಾಯದ ಉತ್ತರಕ್ಕೆ" ಎಂಬ ಪಾಠದಲ್ಲಿನ ಶಿಷ್ಯತ್ವದ ಮೂರು ಹಂತಗಳು ಎಂಬ ಚರ್ಚೆಯನ್ನು ನೋಡಿರಿ. ಮತ್ತಾಯ 18:8, 9ರಲ್ಲಿನ ಬಲವಾದ ಬೋಧನೆಯನ್ನು ಸೇರಿಸಲು ನೀವು ಬಯಸಬಹುದು (ನೋಡಿರಿ ಮತ್ತಾಯ 5:29, 30). [12]ಈ ಪರಿಚ್ಛೇದವು ಸ್ವಂತಿಕೆಯನ್ನು ತೆಗೆದುಹಾಕು ಎಂದು ಬೋಧಿಸುವುದಿಲ್ಲ ಬದಲಾಗಿ, ಯಾವುದೇ ಕಾರಣದಿಂದ ದೇವರಿಗೆ ಅವಿಧೇಯವಾಗುವ ಬೋಧನೆಯ ತತ್ವಗಳನ್ನು "ತೆಗೆದುಹಾಕುವದು" (ಕಳಚಿಕೊಳ್ಳುವ) ನಿನಗೆ ಅವಶ್ಯವಿದೆ. [13]ಈ ಸಾಲುಗಳನ್ನು ಬರೆಯುವಾಗಲೂ ಕೂಡಾ, ಇತರ ದೇಶಗಳಲ್ಲಿನ ಕ್ರೈಸ್ತರು ಪರೀಕ್ಷೀಸ ಲ್ಪಟ್ಟಂತೆ ನಾನು ಆಗಿಲ್ಲ ಎಂಬುದರ ಬಗೆಗೆ ನಾನು ಎಚ್ಚರಿಕೆಯುಳ್ಳವನಾಗಿರುತ್ತೇನೆ. ಯೇಸುವನ್ನು ಹಿಂಬಾಲಿಸಲು, ಅವರು ತಮಗೆ ಅಮೂಲ್ಯವಾದವುಗಳೆಲ್ಲವನ್ನೂ ಸಂಪೂರ್ಣವಾಗಿ ಬಿಟ್ಟುಬಿಟ್ಟರು. ಯೇಸುವಿನ ಶಿಷ್ಯರಾಗಲು ಅವರು ಬಡತನದ ಮತ್ತು/ಅಥವಾ ಹಸಿವೆಯ ಅಂಚಿನಲ್ಲಿ ಜೀವಿಸಿದರು. ನನ್ನ ಹೃದಯವು ಉಕ್ಕಿಬರುತ್ತದೆ ಮತ್ತು "ನಮ್ಮ ಮಧ್ಯದಲ್ಲಿ ಉತ್ತಮ ಉದಾಹರಣೆಯಾಗಲು ದೇವರು ನಿಮ್ಮನ್ನು ಆಶೀರ್ವದಿಸಲಿ" ಎಂದು ಹೀಗೆ ಮಾತ್ರ ನಾನು ಹೇಳಬಲ್ಲೆ. [14]ಯೇಸುವನ್ನು ಹಿಂಬಾಲಿಸುವಲ್ಲಿ ಒಳಗೊಂಡಂಥಹ ಎಲ್ಲಾ ಅಪೊಸ್ತರ ಬಲಹೀನತೆ ಮತ್ತು ಅರಿತುಕೊಳ್ಳುವಿಕೆಯಲ್ಲಿ ಅವರು ಬೆಳೆಯುತ್ತಿದ್ದ ರೀತಿಯ ಬಗೆಗೆ ನಾನು ಬಲ್ಲವನಾಗಿ ದ್ದೇನೆ. ಇನ್ನೂ ಸಹ ಪರಿಣಾಮದ ಅಂತ್ಯವು ಈ ಸಾಲಿನಲ್ಲಿ ಹೇಳ ಲ್ಪಟ್ಟಿದೆ. [15]ನೀವು ಈ ಪ್ರಸಂಗವನ್ನು ಬಳಸುವಾಗ ಶಿಷ್ಯತ್ವಕ್ಕೆ ಬೇಕಾಗುವ ಅರ್ಹತೆಯು ಯಾವುದೇ ಅವಶ್ಯಕತೆಗಾಗಿ ತಮ್ಮನ್ನು ತಾವು ಯೋಗ್ಯರಾಗಿಸಿಕೊಳ್ಳುವಂತೆ ನಿಮ್ಮ ಕೇಳುಗರನ್ನು ಪ್ರೋತ್ಸಾಹಿಸಿರಿ. ಈ ಪಾಠದ ಮುಖ್ಯ ವಿಷಯವಾದ ಅಂತಿಮವಾದ ಪರಿಚ್ಛೇದವನ್ನು ವಿಸ್ತರಿಸಿರಿ.